# ವ್ಯಸನಮುಕ್ತ ದಿನಾಚರಣೆ

ಹುನಗುಂದ: ದಿನಾಂಕ 1-08-2021 ರಂದು ಸ್ಥಳೀಯ ವಿಜಯ ಮಹಾಂತೇಶ ಕೃಪಾಪೋಷಿತ ಎಸ್.ಆರ್. ವಸ್ತ್ರದ ಕಲಾ, ವಿಜ್ಞಾನ ಹಾಗೂ ವ್ಹಿ.ಎಸ್. ಬೆಳ್ಳಿಹಾಳ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಆಂತರಿಕ ಗುಣಮಟ್ಟ ವಿಭಾಗ, ಎನ್.ಎಸ್.ಎಸ್, ಎನ್.ಸಿ.ಸಿ ಹೆರಿಟೇಜ್ ಕ್ಲಬ್, ಸ್ಕೌಟ್ಸ್ ಮತ್ತು ಗೈಡ್ಸ್ ಹಾಗೂ ರೆಡ್ ಕ್ರಾಸ್ ಘಟಕಗಳ ಅಡಿಯಲ್ಲಿ ಪೂಜ್ಯ ಡಾ. ವಿಜಯ ಮಹಾಂತ ಶಿವಯೋಗಿಗಳ ಜನ್ಮ ದಿನಾಚರಣೆಯ ನಿಮಿತ್ತ ವ್ಯಸನಮುಕ್ತ ದಿನಾಚರಣೆಯನ್ನು ಆಚರಿಸಲಾಯಿತು.

ಸಮಾರಂಭದ ಮುಖ್ಯ ಅತಿಥಿಗಳಾದ, ಆಂತರಿಕ ಗುಣಮಟ್ಟ ವಿಭಾಗದ ಸಂಯೋಜಕರಾದ ಡಾ.ಎಸ್.ಆರ್.ಗೋಲಗೊಂಡ ಅವರು ಮಾತನಾಡಿ "ಡಾ. ಮಹಾಂತ ಶಿವಯೋಗಿಗಳು ಜನರ ದುಶ್ಚಟಗಳನ್ನು ತಮ್ಮ ಜೋಳಿಗೆಗೆ ಹಾಕಿಸಿಕೊಂಡು, ಅವರ ಜೀವನವನ್ನು ಹಸನುಗೊಳಿಸುವಲ್ಲಿ ಜೀವನದುದ್ದಕ್ಕೂ ಶ್ರಮಿಸಿದರು" ಎಂದರು. ಸಮಾರಂಭದ ಅಧ್ಯಕ್ಷ ಸ್ಥಾನವಹಿಸಿದ ಕನ್ನಡ ಹಿರಿಯ ಉಪನ್ಯಾಸಕರಾದ ಶ್ರೀ.ಬಿ.ಬಿ. ಕಡ್ಲಿಯವರು ಮಾತನಾಡುತ್ತ "ದುರ್ವ್ಯಸನಗಳನ್ನು ಬಿಕ್ಷೆ ಬೇಡಿ ಮಹಾಂತ ಜೋಳಿಗೆಗೆ ಹಾಕಿಸಿಕೊಳ್ಳುವ ಪರಿಕಲ್ಪನೆ ಹುನುಗುಂದದಲ್ಲಿ ಮೊದಲು ಆರಂಭವಾಯಿತು" ಎಂದು ಅಭಿಪ್ರಾಯಪಟ್ಟರು. "ಈ ಪರಿಕಲ್ಪನೆಯ ಪ್ರಭಾವದಿಂದ ದುರ್ವ್ಯಸನಗಳಿಗೆ ಬಲಿಯಾದ ಅನೇಕ ಜನರು ನವಮಾನವರಾಗಿ ಜೀವನ ನಡೆಸಲು ಸಾಧ್ಯವಾಯಿತು" ಎಂದು ಹೇಳಿದರು.

ವೇದಿಕೆಯ ಮೇಲೆ ರೆಡ್‌ಕ್ರಾಸ್ ಘಟಕದ ಸದಸ್ಯರಾದ ಶ್ರೀಮತಿ. ಎಸ್.ಬಿ. ಅಮಲಿಕೊಪ್ಪ ಅವರು ಉಪಸ್ಥಿತರಿದ್ದರು. ಎನ್.ಎಸ್.ಎಸ್. ಅಧಿಕಾರಿಗಳಾದ ಡಾ. ತಿಪ್ಪೇಸ್ವಾಮಿ ಡಿ.ಎಸ್. ಅವರು ಸಭೆಗೆ ಎಲ್ಲರನ್ನೂ ಸ್ವಾಗತಿಸಿ, ಪ್ರಾಸ್ತಾವಿಕ ನುಡಿಗಳನ್ನಾಡಿದರು. ಆಂಗ್ಲ ವಿಷಯದ ಉಪನ್ಯಾಸಕರಾದ ಶ್ರೀ. ನವೀನ ಪಾಟೀಲ ಅವರು ವಂದಿಸಿದರು. ಸಮಾರಂಭದಲ್ಲಿ ಪ್ರಾಧ್ಯಾಪಕರಾದ ಡಾ. ಬಿ.ಎಚ್. ಹಲಸಂಗಿ, ಶ್ರೀ. ಎಂ.ಎಸ್. ದರಗಾದ, ಡಾ. ಎಸ್.ಎಸ್. ದರಗಾದ ಮುಂತಾದವರು ಹಾಗೂ ಪ್ರಾಧ್ಯಾಪಕೇತರರು ಹಾಜರಿದ್ದರು.

ಹುನಗುಂದ.
01–08–2021

ಪ್ರಾಚಾರ್ಯರು

Principal
Vijaya Mahantesh Krupaposhit
S.R.Vastrad Arts, Science and Vijay
Shankarappa Bellihal Commerce College
Hungund-587118 (Dist Bagalkot-Karnataka)

Coordinator
IQAC
Vijaya Mahantesh Krupapohit S.R.Vastrad
Arts,Science & Vijay Shankarappa Bellihal
Commerce College, Hungund-587118
Dist:Bagalkote State:Karnataka

Scanned with AltaScanner

# Anti-drug Addiction Day Celebrated

Hungund: Anti-drug Addiction Day was celebrated at V.M.K.S.R. Vastrad Arts, Science and V.S. Bellihal Commerce College Hungund or 01-08-2021 in association with IQSC, NSS, NCC, Heritage club, Scouts and Guides and Red cross units, or the eve of Birth Anniversary of His Holiness Dr. Mahant Swamiji m chittaragi sanstanapeeth, Ilkal.

Dr. S.R. Golagond delivered his lecture on the occasion as the chief guest. He said that His Holiness Shri. Mahant Swamiji tried his level best to eradicate bad habits of people furnish his new concert if 'Mahant Jolige'. The program was presided over by the senior faculty member of kormath Shri. B.B. Kahli. He said that the concept of Mahant Jolige was nurtured of people "Bad habits of many number of people were eradicated through this ne Concept". He added.

The Red Cross unit representative smt. S.B. Amalikoppa, was prewent on the don's. N.S.S. officer welcomed and expressed introductory remarks. Shri. N.V. Patil the faculty member of English did vote of thanks. Dr. B.H. Halasangi, the faculty member of Chemistry, Shri. M.S. Daragad, the librarian. Dr. S.S. Daragad, the faculty member of English and others non-teaching staff were present.

Hungund.
01-08-2021

Principal

Principal
Vijaya Mahantesh Krupaposhit S.R.Vastrad Arts, Science and Vijay Shankarappa Bellihal Commerce College Hungund-587118 (Dist·Bagalkot-Karnataka)

Coordinator
IQAC
Vijaya Mahantesh Krupapohit S.R.Vastrad Arts,Science & Vijay Shankarappa Bellihal Commerce College, Hungund-587118 Dist:Bagalkote State:Karnataka

Scanned with AltaScanner